# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಸಂತೋಷ್ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹೊಂಬಾಡಿ ಮಂಡಾಡಿ ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: D.O.NO.Compt/Uplok/MYS-3782/2015/PP Dated: 29-05-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ:19-04-2017 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ದೂರುದಾರರಾದ ಶ್ರೀ ಕೆ.ಬಸವಮೆಂಡನ್‌ರವರು ಕುಂದಾಪುರ ತಾಲ್ಲೂಕಿನ ಹೊಂಬಾಡಿ-ಮಂಡಾಡಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿರುವ ಎರಡು ಅಂಗಡಿ ಕೋಣೆಗಳನ್ನು ತಿಂಗಳೊಂದಕ್ಕೆ 500/- ರೂ.ಗಳಿಗೆ ಬಾಡಿಗೆ ನೀಡಿರುತ್ತಾರೆ. ಆದರೆ ಕಳೆದ ಸಾಲಿನಲ್ಲಿ ಇದೇ ಅಂಗಡಿಗೆ 3000/- ಕ್ಕೆ ದೂರುದಾರರು ಬಿಡ್ ಮಾಡಿದ್ದು, ನಂತರ ಬೇರೆಯವರಿಗೆ ಬಿಡ್‌ನಲ್ಲಿ 3050/- ಕ್ಕೆ ತೀರ್ಮಾಣವಾಗಿತ್ತು. ಆದರೆ ಪ್ರಸ್ತುತ ಸಾಲಿನಲ್ಲಿ ಸಾರ್ವಜನಿಕರ ಗಮನಕ್ಕೆ ತರದೇ ಸದರಿ ಅಂಗಡಿಯನ್ನು ಈ ಚಂದ್ರ ಹೆಗ್ಗಡೆಯವರು ಬೇರೆಯವರ ಹೆಸರಿನಲ್ಲಿ ರೂ. 500/-ಕ್ಕೆ ಬಾಡಿಗೆಗೆ ಪಡೆದಿರುತ್ತಾರೆ. ಹಾಗೂ ಸದರಿ ಜಾಗದಿಂದ ಸುಮಾರು 5000 ಲೋಡ್ ಮಣ್ಣನ್ನು ಕೇವಲ 13,000/- ಕ್ಕೆ ಬಿಡ್ ಮಾಡಿದವರಿಗೆ ನೀಡಿರುತ್ತಾರೆ. ಸದರಿ ಮಣ್ಣಿನ ಬೆಲೆ 50 ಲಕ್ಷ ಇರುತ್ತದೆ. ಈ ಮಣ್ಣನ್ನು ಶ್ರೀ ಸುಧಾಕರ ಶೆಟ್ಟಿ ಎನ್ನುವವರು ತನ್ನ 3 ಎಕರೆ ಜಾಗದಲ್ಲಿ ತುಂಬಿಸಿಕೊಂಡಿರುತ್ತಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗಿರುತ್ತದೆ. ಕಾರಣ ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಸಲ್ಲಿಸಿದ ದೂರಿನ್ವಯ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡಿರುವುದಾಗಿ ತಿಳಿಸಿರುತ್ತಾರೆ.

ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸಹಾಯಕ ಆಯುಕ್ತರು, ಕುಂದಾಪುರ ಇವರು ಹೊಂಬಾಡಿ-ಮಂಡಾಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಜಪ್ತಿ ಗ್ರಾಮದ ಸರ್ವೇ ನಂ.304 ರಲ್ಲಿ 2 ಎಕರೆ ಜಮೀನನ್ನು ಎಲ್&ಡಿ/ಸಿಆರ್/103/2011-12, ದಿನಾಂಕ:22-12-2011 ರಂದೇ ಗ್ರಾಮ ಪಂಚಾಯತಿಗೆ ನಿವೇಶನ ರಹಿತರಿಗೆ ನಿವೇಶನ ಮಾಡಿ ಹಂಚಲು ಕಾದಿರಿಸಿರುತ್ತಾರೆ. ಸದರಿ ಜಮೀನು ಏರುತಗ್ಗಿನಿಂದ ಕೂಡಿದ್ದರಿಂದ, ನಿವೇಶನ ರಚನೆಗೆ ಸಮತಟ್ಟು ಮಾಡುವುದು ಅವಶ್ಯಕವಾಗಿದ್ದು, ಇದನ್ನು ಮನಗಂಡು ಗ್ರಾಮ ಪಂಚಾಯತಿಯು ದಿನಾಂಕ:13-02-2012 ರಂದು ಈ ಜಾಗವನ್ನು ಸಮತಟ್ಟು ಮಾಡಲು ಬಹಿರಂಗ ಏಲಂನ್ನು ವ್ಯಾಪಕ ಪ್ರಚಾರದ ಮೂಲಕ ಅರ್ಹ ಬಿಡ್ದುದಾರರಗೆ ಆಹ್ವಾನವನ್ನು ನೀಡಲಾಗಿತ್ತು. ಗ್ರಾಮ ಪಂಚಾಯತಿಯ ಅಧ್ಯಕ್ಷರು ಮತ್ತು ಸದಸ್ಯರ ಸಮ್ಮುಖದಲ್ಲಿ ಗರಿಷ್ಠ ಬಿಡ್‌ನ್ನು ನೀಡಿದ ಶ್ರೀ ಲಕ್ಷ್ಮಣ್ ಕಟ್ಟಿಕೇರಿ ಇವರಿಗೆ ಬಿಡ್‌ನ್ನು ನೀಡಲಾಗಿರುತ್ತದೆ. ಈ ಏಲಂಗೆ ಪೂರಕವಾಗಿ ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಬೈಂದೂರು ಇವರಿಂದ ಜಾಗ ಸಮತಟ್ಟು ಮಾಡಲು ಅಂದಾಜುಪಟ್ಟಿಯನ್ನು ಕೋರಿದ್ದು, ರೂ.2.00 ಲಕ್ಷಕ್ಕೆ ಅಂದಾಜುಪಟ್ಟಿಯನ್ನು ನೀಡಲಾಗಿರುತ್ತದೆ. ಈ ತಾಂತ್ರಿಕ ಹಿನ್ನೆಲೆಯಲ್ಲಿ ಏಲಂ ಪ್ರಕ್ರಿಯೆಯಿಂದ ಜಾಗ ಸಮತಟ್ಟಾಗುತ್ತದೆ ಮತ್ತು ರೂ.2.00 ಲಕ್ಷ ಉಳಿತಾಯವಾಗುತ್ತದೆ ಎಂದು ಪರಿಗಣಿಸಿ ಗ್ರಾಮ ಪಂಚಾಯತಿಯು ಏಲಂಗೆ ಒಪ್ಪಿಗೆ ಸೂಚಿಸಿರುತ್ತಾರೆ. ಏಲಂ ಪ್ರಕಟಣೆಯಲ್ಲಿ ಸೂಚಿಸಿದ ಬಿಡ್‌ದಾರರು ಜಾಗವನ್ನು ಸಮತಟ್ಟುಗೊಳಿಸಿ, ಗ್ರಾಮ ಪಂಚಾಯತಿಯ ಗಮನಕ್ಕೆ ತಂದು ಉಳಿಕೆಯಾದ ಹೆಚ್ಚುವರಿ ಮಣ್ಣನ್ನು ಮಾತ್ರ ಹೊರಗೆ ಸಾಗಿಸಿರುತ್ತಾರೆ. ದೂರುದಾರರು ಉಲ್ಲೇಖಿಸಿರುವ 5000 ಲೋಡ್ ಮಣ್ಣು ಕಲ್ಪನಾತೀತವಾಗಿರುತ್ತದೆ. ಗ್ರಾಮಸ್ಥರ ಸಮಕ್ಷಮ ಪಾರದರ್ಶಕವಾಗಿ ಮತ್ತು ಲಾಭದಾಯವಾಗಿ ಏಲಂ ಪ್ರಕ್ರಿಯೆ ನಡೆದಿರುತ್ತದೆ.

ಹೊಂಡಾಡಿ-ಮಂದಾಡಿ ಗ್ರಾಮ ಪಂಚಾಯತಿಯ ಜಪ್ತಿ ಗ್ರಾಮದಲ್ಲಿ 2 ಹಳೆಯ ಹೆಂಚಿನ ಅಂಗಡಿ ಕೋಣೆಗಳಿರುತ್ತವೆ. ಸದರಿ ಅಂಗಡಿಯನ್ನು ದಿನಕ್ಕೆ ರೂ.10/- ರಂತೆ ರೂ.300/- ಕ್ಕೆ ತಿಂಗಳೊಂದಕ್ಕೆ ಬಾಡಿಗೆಯಂತೆ ಮುಖಬೆಲೆಯಾಗಿ ಏಲಂನ್ನು ಕರೆಯಲಾಗಿದ್ದು, ಪ್ರತಿ 4 ವರ್ಷಕ್ಕೊಮ್ಮೆ ತೆರಿಗೆ ಪರಿಷ್ಕರಣೆಯ ಸಂದರ್ಭದಲ್ಲಿ ಮುಖಬೆಲೆಯನ್ನು ಪರಿಷ್ಕರಿಸಲಾಗುತ್ತದೆ. ಸರ್ಕಾರಿ ಮುಖಬೆಲೆಯಾಗಿ ರೂ.300/-ಕ್ಕೆ ಏಲಂನ್ನು ಕರೆಯಲಾಗಿರುತ್ತದೆ. ದೂರುದಾರರು ವೈಯಕ್ತಿಕ ಕಾರಣಗಳಿಂದಾಗಿ, ರೂ.2000/- ಕ್ಕೆ ಒಮ್ಮೆಲೆ ಬಿಡ್‌ನ್ನು ಹೆಚ್ಚಿಸಿದ್ದು, ವ್ಯಕ್ತಿಗತ ವೈಷಮ್ಯದಿಂದ ರೂ. 3050/-ಕ್ಕೆ ಅಂತಿಮವಾಗಿ ಬಿಡ್‌ನ್ನು ನೀಡಲಾಗಿರುತ್ತದೆ. ಏಲಂನ ಷರತ್ತಿನಂತೆ ಮುಂಗಡವನ್ನು ಒಮ್ಮೆಲೆ ಪಾವತಿಸಿದ ಬಿಡ್‌ದಾರರು ನಂತರ ಬಾಡಿಗೆಯನ್ನು ಪಾವತಿಸಲಾಗದೆ ಗ್ರಾಮ ಪಂಚಾಯತಿಗೆ ಬಾಡಿಗೆ ಕಡಿಮೆ ಮಾಡುವಂತೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪುರಸ್ಕರಿಸಿದ ಗ್ರಾಮ ಪಂಚಾಯತಿಯು ಪಾರದರ್ಶಕವಾಗಿ ಬಹಿರಂಗವಾಗಿ ಮರು ಏಲಂನ್ನು ಸರ್ವರ ಸಮಕ್ಷಮ ನಡೆಸಲಾಗಿರುತ್ತದೆ. ನಿಯಮದಂತೆ ಸದರಿ ಏಲಂನಲ್ಲೂ ಸಹ ರೂ.300/- ನ್ನು ಮುಖಬೆಲೆಯನ್ನಾಗಿ ಗ್ರಾಮ ಪಂಚಾಯತಿಯ ವತಿಯಿಂದ ನೀಡಲಾಗಿದೆ. ರೂ.500/- ಕ್ಕೆ ಅಂತಿಮ ಬಿಡ್‌ನ್ನು ಮಾಡಲಾಗಿರುತ್ತದೆ. ಆದ್ದರಿಂದ, ದೂರುದಾರರು ತಿಳಿಸಿರುವಂತಹ ಯಾವುದೇ ಅವ್ಯವಹಾರಗಳು ನಡೆದಿರುವುದಿಲ್ಲ. ದೂರುದಾರರು ವೈಯಕ್ತಿಕ ದ್ವೇಷದ ಹಿನ್ನೆಲೆಯಲ್ಲಿ ಸುಳ್ಳು ದೂರನ್ನು ನೀಡಿರುತ್ತಾರೆ. ಆದ್ದರಿಂದ ತಮ್ಮ ಮೇಲಿನ ಪ್ರಕರಣವನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

ದೂರುದಾರರಿಂದ ಎದುರುದಾರರ ಆಕ್ಷೇಪಣೆಯ ಮೇರೆಗೆ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ದೂರಿನ ಅಂಶಗಳನ್ನೇ ಪುನರುಚ್ಛರಿಸಿರುತ್ತಾರೆ.

ಈ ಹಂತದಲ್ಲಿ ಪ್ರಕರಣದ ತನಿಖೆಯನ್ನು ಈ ಸಂಸ್ಥೆಯ ಉಡುಪಿಯ ಆರಕ್ಷಕ ಉಪಾಧೀಕ್ಷಕರಿಗೆ ವಹಿಸಿದ್ದು, ಸದರಿಯವರು ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ತನಿಖಾಧಿಕಾರಿಯವರು ಹೊಂಬಾಡಿ-ಮಂಡಾಗಿ ಗ್ರಾಮ ಪಂಚಾಯತಿಯ ಜಪ್ತಿ ಗ್ರಾಮದಲ್ಲಿ ಇರುವ 2 ಹಳೆಯ ಹೆಂಚಿನ ಕೊಠಡಿಗಳನ್ನು ಅಂತಿಮವಾಗಿ ಶ್ರೀ ಸೀತಾರಾಮಶೆಟ್ಟಿಯವರಿಗೆ ರೂ.500/- ಕ್ಕೆ ಏಲಂ ಮುಖೇನ ನೀಡಲಾಗಿರುತ್ತದೆ. ಎಲ್ಲಾ ಏಲಂಗಳು ಪಾರದರ್ಶಕವಾಗಿ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗದಂತೆ, ಸಾರ್ವಜನಿಕ ಸಮ್ಮುಖದಲ್ಲಿ ನಡೆಸಲಾಗಿರುತ್ತದೆ. ಬಿಡ್‌ದಾರರು ಪಂಚಾಯತಿಗೆ ರೂ.13,000/- ನ್ನು ಪಾವತಿಸಿರುವ ಬಗ್ಗೆ ರಶೀದಿಯನ್ನು ಸಹ ಹಾಜರುಪಡಿಸಿರುತ್ತಾರೆ. ಆದ್ದರಿಂದ, ಅಂಗಡಿ ಕೋಣೆ ಸಂಖ್ಯೆ.3ನ್ನು ಬಹಿರಂಗ ಹರಾಜಿನ ಮೂಲಕ ದಿನಾಂಕ:25-06-2013 ರಂದು ಏಲಂ ಪ್ರಕ್ರಿಯೆ ನಡೆಸಿ, ಏಲಂ ಪ್ರಕಾರ ಬಿಡ್‌ದಾರರಿಗೆ ರೂ.3050/- ಕ್ಕೆ ಅಂತಿಮ ಬಿಡ್‌ನ್ನು ಮಾಡಲಾಗಿರುತ್ತದೆ. ತದನಂತರ ಬಿಡ್‌ದಾರರು ಬಾಡಿಗೆ ಪಾವತಿಸಲಾಗದೇ, ಗ್ರಾಮ ಪಂಚಾಯತಿಗೆ ಬಾಡಿಗೆ ಕಡಿಮೆ ಮಾಡುವಂತೆ ಅಥವಾ ಮರು ಹರಾಜು ಮಾಡುವಂತೆ ಅರ್ಜಿ ಸಲ್ಲಿಸಿದ ಮೇರೆಗೆ ಗ್ರಾಮ ಪಂಚಾಯತಿ ವತಿಯಿಂದ ದಿನಾಂಕ:11-11-2014 ರಂದು ಬಹಿರಂಗ ಹರಾಜು ಪ್ರಕ್ರಿಯೆ ಮಾಡಿಸಿ, ನಿಯಮದಂತೆ ರೂ.300/- ರ ಮುಖಬೆಲೆಯನ್ನು ಪಂಚಾಯತಿಯಿಂದ ನೀಡಿ, ರೂ.500/- ಕ್ಕೆ ಅಂತಿಮ ಬಿಡ್‌ನ್ನು ನಿಗದಿಗೊಳಿಸಲಾಗಿರುತ್ತದೆ.

ಜಪ್ತಿ ಗ್ರಾಮದ ಸರ್ವೇ ನಂ.304 ಸರ್ಕಾರಿ ಜಮೀನಾಗಿದ್ದು, ಅದನ್ನು ಸಮತಟ್ಟುಗೊಳಿಸುವ ನಿಟ್ಟಿನಲ್ಲಿ ದಿನಾಂಕ:13-02-2012 ರಂದು ಬಹಿರಂಗ ಏಲಂ ಪ್ರಕ್ರಿಯೆ ನಡೆಸಿದ್ದು, ಸದರಿ ಏಲಂನಲ್ಲಿ ರೂ.10,000/- ಮುಖಬೆಲೆಯನ್ನು ನಿಗದಿಪಡಿಸಿದ್ದು, ಸದರಿ ಮುಖಬೆಲೆಗಿಂತ ಹೆಚ್ಚಾಗ ರೂ.30,000/- ಕ್ಕೆ ಬಿಡ್‌ದಾರರಿಗೆ ನೀಡಿರುವುದು ಕಂಡುಬಂದಿರುತ್ತದೆ. ಬಿಡ್‌ದಾರರಾದ ಶ್ರೀ ಲಕ್ಷ್ಮಣಶೆಟ್ಟಿಯವರು ಜಾಗವನ್ನು ಸಮತಟ್ಟುಗೊಳಿಸಿದ ನಂತರ ಹೆಚ್ಚುವರಿಯಾದ ಮಣ್ಣನ್ನು ತಮ್ಮ ತೋಟಕ್ಕೆ ಬಳಸಿಕೊಂಡಿರುವುದು ಕಂಡುಬಂದಿರುತ್ತದೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ಗ್ರಾಮ ಪಂಚಾಯಿತಿ ನಿರ್ಣಯದಂತೆ ಹೆಚ್ಚುವರಿ ಮಣ್ಣನ್ನು 40 ಲೋಡಿಗೆ ಮಿತಿಗೊಳಿಸಿರುವುದು ಕಂಡುಬಂದಿರುತ್ತದೆ. ಆದರೆ, ಸ್ಥಳ ಪರಿಶೀಲನೆ ಕಾಲದಲ್ಲಿ 40 ಲೋಡಿಗಿಂತಲು ಹೆಚ್ಚಿಗೆ ಸಾಗಟ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ ಎಂದು ತನಿಖಾಧಿಕಾರಿಗಳು ತಿಳಿಸಿರುತ್ತಾರೆ.

ದೂರಿನ ಅಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು, ತನಿಖಾಧಿಕಾರಿಯವರ ವರದಿಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಜಪ್ತಿ ಗ್ರಾಮದ ಸರ್ವೇ ನಂ.304 ರ ಜಮೀನನ್ನು ಸಮತಟ್ಟುಗೊಳಿಸುವ ವಿಚಾರದಲ್ಲಿ ಏಲಂ ಪ್ರಕಟಣೆಯನ್ನು ಹೊರಡಿಸಿದ್ದು, (ಸದರಿ ಏಲಂ ಪ್ರಕಟಣೆಯನ್ನು ಹಾಜರುಪಡಿಸಲಾಗಿದೆ) ಸದರಿ ಪ್ರಕಟಣೆಯನ್ನು ಪರಿಶೀಲಿಸಿದ್ದಲ್ಲಿ ಏಲಂನ್ನು ದಿನಾಂಕ:13-02-2012 ಕ್ಕೆ ನಿಗದಿಗೊಳಿಸಿರುವುದು ಕಂಡುಬಂದಿರುತ್ತದೆ. ಹಾಗೆಯೇ ಏಲಂ ಷರತ್ತುಗಳಲ್ಲಿ ಮಣ್ಣಿನ ದರವು ಹರಾಜಿನ ದರಕ್ಕಿಂತ ಶೇಕಡ 5 ಕ್ಕಿಂತ ಜಾಸ್ತಿಯಾಗಿದೆ ಎಂದು ಪಂಚಾಯತಿಯು ಭಾವಿಸಿದರೆ, ಹರಾಜಿನ ಮೊತ್ತವನ್ನು ಕ್ರಮಾನುಸಾರ ಹೆಚ್ಚಿಸುವ ಹಕ್ಕನ್ನು ಕಾಯ್ದಿರಿಸಿದೆ ಎಂದು ನಮೂದಿಸಿರುವುದು ಕಂಡುಬರುತ್ತದೆ. ಸದರಿ ಹರಾಜಿನ ಪ್ರಕ್ರಿಯೆಯಲ್ಲಿ 9 ಜನ ಬಿಡ್‌ದಾರರು ಭಾಗವಹಿಸಿರುವುದು ಕಂಡುಬರುತ್ತದೆ (ಹರಾಜು

ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ವ್ಯಕ್ತಿಗಳ ಹೆಸರುಗಳನ್ನು ಪಟ್ಟಿಯನ್ನು ಹಾಜರುಪಡಿಸಲಾಗಿದೆ). ಶ್ರೀ ಲಕ್ಷ್ಮಣಶೆಟ್ಟಿಯವರು ಬಿಡ್‌ನಲ್ಲಿ ಇವರು ರೂ. 13,000/- ಕ್ಕೆ ಹರಾಜಿನಲ್ಲಿ ಹಾಜರುಪಡಿಸಿರುವ ಬಿಡ್‌ದಾರರ ಬಿಡ್‌ನ ಮೊತ್ತ ತೋರಿಸುವ ಪಟ್ಟಿಯಿಂದ ಕಂಡುಬರುತ್ತದೆ (ಸದರಿ ದಾಖಲೆಯನ್ನು ಹಾಜರುಪಡಿಸಲಾಗಿದೆ). ದಿನಾಂಕ:01-12-2012 ರಂದು ಜರುಗಿದ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಸರ್ವೇ ನಂ.304 ರ ಜಮೀನನ್ನು ಸಮತಟ್ಟುಗೊಳಿಸುವ ಕಾಲದಲ್ಲಿ 30-40 ಲೋಡ್ ಮಣ್ಣು ಹೆಚ್ಚುವರಿಯಾಗಿ ಪಡೆಯಬಹುದೆಂದು ಅಭಿಪ್ರಾಯಪಟ್ಟು, ಸದರಿ ಹೆಚ್ಚುವರಿ ಮಣ್ಣನ್ನು ಪಾರದರ್ಶಕ ಏಲಂ ಪ್ರಕಾರ ಮಾರುವುದರಿಂದ, ಸದರಿ ಜಾಗವು ಸಮತಟ್ಟಾಗುವುದಲ್ಲದೇ, ಗ್ರಾಮ ಪಂಚಾಯತಿಗೆ ಆದಾಯವಾಗುತ್ತದೆಂದು ಹಾಗೂ ಅದರಂತೆ, ಸದರಿ ಮಣ್ಣಿನ ಮಾರಾಟದ ಏಲಂನಲ್ಲಿ ರೂ.10,000/- ಮುಖಬೆಲೆಯಾಗಿ ನಿರ್ಧರಿಸಲು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕಂಡುಬರುತ್ತದೆ (ಸದರಿ ಪಂಚಾಯತಿಯ ಠರಾವನ್ನು ಹಾಜರುಪಡಿಸಲಾಗಿದೆ).

ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿಕೊಂಡು ಜಪ್ತಿ ಗ್ರಾಮದ ಸರ್ವೇ ನಂ.304 ರ ಜಮೀನನ್ನು ಸಮತಟ್ಟುಗೊಳಿಸುವಾಗ ಹೆಚ್ಚುವರಿ ಮಣ್ಣನ್ನು ಮಾರಾಟ ಮಾಡಲು ಏಲಂನಲ್ಲಿ ಅದರ ಮುಖಬೆಲೆಯನ್ನು ರೂ.10,000/- ಎಂದು ನಿರ್ಧರಿಸಿರುವುದು ಸ್ಪಷ್ಟಪಡುತ್ತದೆ ಹಾಗೂ ಸದರಿ ಜಮೀನನ್ನು ಸಮತಟ್ಟುಗೊಳಿಸುವುದರಿಂದ, ಸುಮಾರು 30 ರಿಂದ 40 ಲೋಡ್ ಹೆಚ್ಚುವರಿ ಮಣ್ಣು ದೊರೆಯುತ್ತದೆ ಎಂದು ಅಂದಾಜು ಮಾಡಿರುವುದು ಠರಾವಿನ ಪ್ರತಿಯಿಂದ ಕಂಡುಬರುತ್ತದೆ. ಸ್ಥಳ ಪರಿಶೀಲನೆ ನಡೆಸಿದ ತನಿಖಾಧಿಕಾರಿಯವರು 40 ಲೋಡ್ ಮಣ್ಣಿಗಿಂತ ಹೆಚ್ಚಿಗೆ ಸಾಗಿರುವುದಾಗಿ ಮೇಲ್ನೋಟಕ್ಕೆ ಕಂಡುಬರುತ್ತದೆ ಎಂದು ತಿಳಿಸಿರುತ್ತಾರೆ.

ಜಪ್ತಿ ಗ್ರಾಮದ ಅಂಗಡಿಕೋಣೆಗಳನ್ನು ಎಲಂನಲ್ಲಿ ಬಾಡಿಗೆಗೆ ನೀಡಿದ್ದು, ಸದರಿ ಅಂಗಡಿ ಕೋಣೆ ಸಂಖ್ಯೆ:3 ಕ್ಕೆ ಸಂಬಂಧಿಸಿದಂತೆ, 5 ಜನ ಬಿಡ್‌ದಾರರು ಏಲಂ ಪ್ರಕ್ರಿಯೆಯಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ (ಬಿಡ್‌ದಾರರ ಪಟ್ಟಿಯನ್ನು ಹಾಜರುಪಡಿಸಲಾಗಿದೆ). ಸದರಿ ಏಲಂ ಪ್ರಕ್ರಿಯೆಯಲ್ಲಿ ಶ್ರೀ ಸಂತೋಷ್ ಇವರು ರೂ.3050/- ಕ್ಕೆ ಬಾಡಿಗೆಗೆ ಅಂತಿಮವಾಗಿ ಜಯಶಾಲಿಯಾದ ಬಿಡ್‌ದಾರರೆಂದು ಕಂಡುಬರುತ್ತದೆ (ಬಿಡ್‌ದಾರರು ಮಾಡಿದ ಬಿಡ್‌ನ ಮೊತ್ತವನ್ನು ತೋರಿಸುವ ಪಟ್ಟಿಯನ್ನು ಹಾಜರುಪಡಿಸಲಾಗಿದೆ). ಸದರಿ ಶ್ರೀ ಸಂತೋಷ್ ಪೂಜಾರಿ ಇವರು ಅಂಗಡಿ ಸಂ.3ರ ಬಾಡಿಗೆ ದುಬಾರಿಯಾಗಿರುವುದರಿಂದ ಹಾಗೂ ತಾನು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವುದರಿಂದ, ಅಂಗಡಿಯ ಬಾಡಿಗೆಯನ್ನು ರೂ,300/- ಕ್ಕೆ ನಿಗದಿಗೊಳಿಸುವಂತೆ ಕೋರಿರುತ್ತಾರೆ ಹಾಗೂ ಇಲ್ಲವಾದಲ್ಲಿ ಡಿಸೆಂಬರ್ ತಿಂಗಳಿನಿಂದ ಅನ್ವಯವಾಗುವಂತೆ ಮತ್ತೆ ಏಲಂ ನಡೆಸಲು ತನ್ನ ಯಾವುದೇ ಅಭ್ಯಂತರವಿಲ್ಲವೆಂದು ಪತ್ರ ಬರೆದಿರುತ್ತಾರೆ. (ಸದರಿ ಪತ್ರವನ್ನು ಹಾಜರುಪಡಿಸಲಾಗಿದೆ) ನಂತರ ದಿನಾಂಕ:11-11-2014 ರಂದು ಸದರಿ ಅಂಗಡಿ ಸಂಖ್ಯೆ.3 ಕ್ಕೆ ಸಂಬಂಧಿಸಿದಂತೆ, ಬಹಿರಂಗ ಹರಾಜು ಪ್ರಕ್ರಿಯೆಯನ್ನು ನಡೆಸಿದ್ದು, ಅದರಲ್ಲಿ ಶ್ರೀ ಸೀತಾರಾಮಶೆಟ್ಟಿ ಎನ್ನುವವರು ಅಂಗಡಿ ಬಾಡಿಗೆ ರೂ.500/- ಕ್ಕೆ ಬಿಡ್ ಮಾಡಿದ್ದು, ಅದು ಅಂತಿಮ ಬಿಡ್ ಮೊತ್ತವೆಂದು ಕಂಡುಬರುತ್ತದೆ ಎಂದು ಹಾಜರುಪಡಿಸಿರುವ ಪಟ್ಟಿಯಿಂದ ಕಂಡುಬರುತ್ತದೆ (ಸದರಿ ಪಟ್ಟಿಯನ್ನು ಹಾಜರುಪಡಿಸಲಾಗಿದೆ). ಹಾಗೆಯೇ ಅಂಗಡಿ ಸಂಖ್ಯೆ. 4 ಕ್ಕೆ ಸಂಬಂಧಪಟ್ಟಂತೆ, ದಿನಾಂಕ:29-11-2011 ರಂದು ಏಲಂ ಪ್ರಕ್ರಿಯೆಯನ್ನು ಕೈಗೊಂಡಿದ್ದು, ಅದರಲ್ಲಿ ಶ್ರೀಮತಿ ಶುಭಾವತಿ ಎನ್ನುವವರು ರೂ. 260/-ಕ್ಕೆ ಬಿಡ್‌ನ್ನು ಕೂಗಿದ್ದು, ಸದರಿ ರೂ.260/- ಅಂತಿಮ ಬಿಡ್ ಮೊತ್ತವಾಗಿರುವುದು ಕಂಡುಬರುತ್ತದೆ (ಬಿಡ್ ಮೊತ್ತದ ಪಟ್ಟಿಯನ್ನು ಹಾಜರುಪಡಿಸಲಾಗಿದೆ)

ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದ್ದಲ್ಲಿ, ಜಪ್ತಿ ಗ್ರಾಮದ ಅಂಗಡಿ ಕೋಣೆಗಳು ರೂ.260/- ರಿಂದ ರೂ. 500/- ರ ಬಾಡಿಗೆಯ ಅಂಗಡಿಗಳಾಗಿರುತ್ತವೆ ಎಂದು ಕಂಡುಬರುತ್ತದೆ. ಆದರೆ, ದೂರುದಾರರು ತಿಳಿಸಿರುವಂತೆ ದಿನಾಂಕ:25-06-2013 ರಂದು ಅಂಗಡಿ ಸಂಖ್ಯೆ. 3ನ್ನು ರೂ.3050/-ಕ್ಕೆ ಬಿಡ್ ಮಾಡಿದ್ದು, ಇದನ್ನು ಶ್ರೀ ಸಂತೋಷ್ ರವರು ಬಾಡಿಗೆಗೆ ತೆಗೆದುಕೊಂಡಿರುತ್ತಾರೆ. ಆದರೆ, ಎದುರುದಾರರು ತಿಳಿಸಿದಂತೆ ವೈಯಕ್ತಿಕ ದ್ವೇಷದ ಮೇಲೆ ಬಿಡ್ಡಿನ ಮೊತ್ತವನ್ನು ಹೆಚ್ಚಿಸಲಾಗಿದೆ ಎಂದು ತಿಳಿಸಿರುವ ಅಂಶವು ನಂಬಲರ್ಹವಾದುದಲ್ಲ. ಏಕೆಂದರೆ ಬಿಡ್ ಮೊತ್ತವನ್ನು ಅವರು ತೋರಿಸುವ ಪಟ್ಟಿಯಲ್ಲಿ 4 ಜನ ಬಿಡ್‌ದಾರರ ಬಿಡ್ ಮೊತ್ತವನ್ನು ತೋರಿಸಲಾಗಿದೆ. ಇದರಲ್ಲಿ ಬಿಡ್ಡಿನ ಮೊತ್ತವು ರೂ.2000/- ರಿಂದ ಹಿಡಿದು ರೂ. 3000/- ರವರೆಗೆ ಬಿಡ್ ಮಾಡಿರುವುದು ಕಂಡುಬರುತ್ತದೆ. ಈ ಬಿಡ್‌ನಲ್ಲಿ ದೂರುದಾರರು ಸಹ ಭಾಗವಹಿಸಿದ್ದು, ಅವರು ರೂ.2000/- ರಿಂದ ರೂ.3000/- ರವರೆಗೆ ಬಿಡ್ ಮಾಡಿರುವುದು ಕಂಡುಬರುತ್ತದೆ. ಇದಲ್ಲದೇ, ಶ್ರೀ ಸೀತಾರಾಮಶೆಟ್ಟಿಯವರು, ಶ್ರೀ ಉದಯಪೂಜಾರಿಯವರು ಮತ್ತು ಶ್ರೀ ಸಂತೋಷ್‌ರವರು ಸಹ ರೂ.2000/-ಕ್ಕೆ ಮೇಲ್ಪಟ್ಟು ಬಿಡ್ ಮಾಡಿರುವುದು ಕಂಡುಬಂದಿರುತ್ತದೆ. ಆದರೆ, ಸದರಿ ದೂರುದಾರರು 2ನೇ ಬಾರಿ ನಡೆಸಿದ ಏಲಂನಲ್ಲಿ ಭಾಗವಹಿಸದೇ ಇರುವುದು ಕಂಡುಬಂದಿರುತ್ತದೆ. ಆದ್ದರಿಂದ ದೂರುದಾರರು ತಿಳಿಸಿರುವಂತೆ ಅಂಗಡಿ ಕೋಣೆ ಸಂ.3 ರ ಹರಾಜಿನಲ್ಲಿ ಹೆಚ್ಚಿನ ಬಾಡಿಗೆಗೆ ಬಿಡ್ ಆಗುತ್ತಿತ್ತು ಎಂದು ಹೇಳಲು ಬರುವುದಿಲ್ಲ. 2ನೇ ಬಾರಿ

ಬಿಡ್ಡಿನಲ್ಲಿ ಭಾಗವಹಿಸಿದ ಬಿಡ್‌ದಾರರ ಪಟ್ಟಿಯಲ್ಲಿ ಮೊದಲನೇ ಬಾರಿ ಬಿಡ್‌ನಲ್ಲಿ ಭಾಗವಹಿಸಿದ ವ್ಯಕ್ತಿಗಳಾದ ಶ್ರೀ ಸಂತೋಷ್‌ಶೆಟ್ಟಿ ಮತ್ತು ಸೀತಾರಾಮಶೆಟ್ಟಿಯವರು ಭಾಗವಹಿಸಿರುವುದು ಕಂಡುಬರುತ್ತದೆ.

ಆದ್ದರಿಂದ, ಎದುರುದಾರರು ತಿಳಿಸಿರುವಂತೆ ಮೊದಲನೇ ಬಾರಿ ಅಂಗಡಿ ಕೋಣೆ-3 ರ ಬಿಡ್ಡಿನಲ್ಲಿ ವೈಯಕ್ತಿಕ ಕಾರಣಗಳ ಹಿನ್ನೆಲೆಯಲ್ಲಿ ಬಿಡ್‌ದಾರರು ಹೆಚ್ಚಿನ ಮೊತ್ತಕ್ಕೆ ಬಿಡ್ ಮಾಡಿರುವುದು ಕಂಡುಬರುವುದಿಲ್ಲ. ಆದರೆ, ಆ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಬಿಡ್ ಮೊತ್ತ "ಸರ್ಕಾರಿ ಸವಾಲು ರೂ.3000/- ಇತ್ತು" ಎಂದು ಕಂಡುಬರುತ್ತದೆ. ಆದ್ದರಿಂದ, ಮೇಲಿನ ಕಾರಣಗಳ ಹಿನ್ನೆಲೆಯಲ್ಲಿ ದೂರುದಾರರು ಮಾಡಿರುವ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ.

ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966, ನಿಯಮ 3(1)(i)(ii) ಮತ್ತು (iii) ರನ್ವಯ ಶ್ರೀ ಸಂತೋಷ್ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹೊಂಬಾಡಿ ಮಂಡಾಡಿ ಗ್ರಾಮ ಪಂಚಾಯತ್, ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ, ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/507/ಗ್ರಾಪಂಕಾ/2017 ಬೆಂಗಳೂರು, ದಿನಾಂಕ- 11-07-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಸಂತೋಷ್ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹೊಂಬಾಡಿ ಮಂಡಾಡಿ ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲ ಪತ್ರಗಳನ್ನು ಪುಟ ಸಂಖ್ಯೆ: 1 ರಿಂದ 53 ವರೆಗೂ ಲಗತ್ತಿಸಿ ಹಿಂದುರಿಗಿಸಲಾಗಿದೆ.)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ
6. ಶ್ರೀ ಸಂತೋಷ್ ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹೊಂಬಾಡಿ ಮಂಡಾಡಿ ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ
8. ಗಣಕ ಕೋಶ.